







# ‘ಜೈನ ಧರ್ಮದ ಅಶೋಕ’ ಸಂಪ್ರತಿ

■ ರಾಘು

ಭಾರತದ ರಾಷ್ಟ್ರಧ್ವಜಕ್ಕೆ ಅಶೋಕಚಕ್ರ ಕೊಡುಗೆ ನೀಡಿದ ಚಕ್ರವರ್ತಿ ಅಶೋಕ ಮಹಾಶಯನ ಮೊಮ್ಮಗ ‘ಜೈನ ಧರ್ಮದ ಅಶೋಕ’ ಎಂದು ಪ್ರಸಿದ್ಧ. ಆತನ ಹೆಸರಿನಲ್ಲಿ ಜೈನ ಮ್ಯೂಸಿಯಂ ಒಂದು ಗುಜರಾತಿನ ರಾಜಧಾನಿ ಗಾಂಧಿನಗರದ ಕೋಬಾದಲ್ಲಿ ಪ್ರತಿಷ್ಠಾಪನೆಯಾಗಿದೆ. ಅದು ಮುಂದಿನ ದಿನಗಳಲ್ಲಿ ಜೈನ ಧರ್ಮ ಅಧ್ಯಯನ ಆಸಕ್ತರ ಜಾಗತಿಕ ಅಗ್ರತಾಣ ಆಗಲಿದೆ ಎಂಬ ನಿರೀಕ್ಷೆಯನ್ನು ಹುಟ್ಟಿಸಿದೆ. ಆಧುನಿಕ ಸೌಲಭ್ಯ ಹಾಗೂ ಡಿಜಿಟಲ್ ಯುಗಕ್ಕೆ ತಕ್ಕಂತೆ ಇದನ್ನು ವಿನ್ಯಾಸ ಮಾಡಲಾಗಿದೆ.

‘ಸಾಮ್ರಾಟ್ ಸಂಪ್ರತಿ ಮ್ಯೂಸಿಯಂ’ ಎಂದೇ ಮಹಾರಾಜರ ಹೆಸರನ್ನು ಅದಕ್ಕೆ ಇಡಲಾಗಿದೆ. ಅದು ತನ್ನ ಒಡಲೊಳಗೆ ಜೈನ ಧರ್ಮ ಇತಿಹಾಸಕ್ಕೆ ಸಂಬಂಧಿಸಿದ ಅಪಾರ ಆಕರ ಸಂಪತ್ತನ್ನು ಹೊಂದಿದೆ ಎನ್ನಲಾಗಿದೆ. ಸುಂದರ ಭವ್ಯ ವಸ್ತುಸಂಗ್ರಹಾಲಯ ಇತ್ತೀಚೆಗಷ್ಟೇ ಲೋಕಾರ್ಪಣೆಯಾಗಿದೆ. ಇದು ಧಾರ್ಮಿಕ ಆರಾಧನೆಯ ಕೇಂದ್ರ ಮಾತ್ರವಲ್ಲದೆ ಭಾರತದ ಪರಂಪರೆಯನ್ನು ಪ್ರತಿಫಲಿಸುತ್ತದೆ. ಭಾರತೀಯ ಧರ್ಮಗಳಲ್ಲಿ ಒಂದಾದ ಜೈನ ಧರ್ಮಕ್ಕೆ ಸಂಬಂಧಿಸಿದ ದಾಖಲೆಯನ್ನು ಆಸಕ್ತರಿಗೆ ನೀಡುತ್ತದೆ. ಅದಕ್ಕಾಗಿ ಹಸ್ತಪ್ರತಿಗಳ ಡಿಜಿಟಲ್ ಆವೃತ್ತಿಯನ್ನೂ ಗಣಕೀಕರಣ ಮಾಡಲಾಗಿದೆ. ಮಾತ್ರವಲ್ಲದೆ, ಪೌರಾಣಿಕ ಮತ್ತು ಧಾರ್ಮಿಕವಾಗಿ ನಂಬಿರುವ ಜೈನರ ‘ತ್ರಿಷಷ್ಠಿ ಶಲಾಕ ಪುರುಷರ’ (63 ಮಹಾಪುರುಷರು: 24 ತೀರ್ಥಂಕರರು, 12 ಚಕ್ರವರ್ತಿಗಳು, 9 ಬಲದೇವ, 9 ವಾಸುದೇವ ಮತ್ತು 9 ಪ್ರತಿವಾಸುದೇವ) ಕುರಿತ ವಿವರ